ಜಾರಿಗೆ ಬಂದಿದೆ.

ಅ) ವ್ಯಾಪಕ ಬೆಳೆ ವಿಮಾ ಯೋಜನೆಯಡಿಯಲ್ಲಿ 1985ರ ಮುಂಗಾರ ಹಂಗಾಮಿನಿಂದ 1999ರ ಮುಂಗಾರು ಹಂಗಾಮಿನವರೆಗೆ ಒಟ್ಟು ಸುಮಾರು 30.01 ಲಕ್ಷ ಜನ ರೈತರು ಬೆಳೆ ವಿಮೆಗೆ ಒಳಗಾಗಿದ್ದಾರೆ. ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿಯಲ್ಲಿ 2000-01 ಮತ್ತು 2001-02ರ ಮುಂಗಾರು ಹಂಗಾಮುಗಳಲ್ಲಿ ಒಟ್ಟು 9.79 ಲಕ್ಷ ಜನರು ಬೆಳೆ ವಿಮೆಗೆ ಒಳಪಟ್ಟಿರುತ್ತಾರೆ.

ಇ) ಮುಂಗಾರು 2002ರ ಹಂಗಾಮಿನಲ್ಲಿ ವಿಮೆಗೆ ಒಳಪಟ್ಟಿರುವ ಬೆಳೆಗಳಿಂದರೆ, ಭತ್ತ, ಜೋಳ, ಸಜ್ಜೆ, ಮುಸುಕಿನ ಜೋಳ, ರಾಗಿ, ತೊಗರಿ, ಉದ್ದು, ಹೆಸರು, ನೆಲಗಡಲೆ (ಶೇಂಗಾ), ಸೂರ್ಯಕಾಂತಿ, ಸೋಯಾ, ಅವರೆ, ಎಳ್ಳು, ಆಲೂಗಡ್ಡೆ, ಈರುಳ್ಳಿ, ಹತ್ತಿ ಮತ್ತು ಕಬ್ಬು. 2001-02ರ ಹಿಂಗಾರಿನಲ್ಲಿ ಯೋಜನೆಗೆ ಒಳಪಟ್ಟಿದ್ದ ಬೆಳೆಗಳು ಭತ್ತ, ಗೋಧಿ, ಜೋಳ, ಕಡಲೆ, ಕುಸುಬೆ ಮತ್ತು ಸೂರ್ಯಕಾಂತಿ ಹಾಗೂ 2002ರ ಬೇಸಿಗೆ ಹಂಗಾಮಿನಲ್ಲಿ ಭತ್ತ, ರಾಗಿ ಮತ್ತು ನೆಲಗಡಲೆ (ಶೇಂಗಾ) ಬೆಳೆಗಳು ಯೋಜನೆಗೆ ಒಳಪಟ್ಟಿದ್ದುವು.

ಈ) ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿಯಲ್ಲಿ ರೈತರಿಂದ ಸಂಗ್ರಹಿಸಲಾದ ವಿಮಾ ಮೊತ್ತದ ಶೇ. 100 ರಷ್ಟನ್ನು ವಿಮಾ ಕಂತಿನಷ್ಟು ನಷ್ಟ ಪರಿಹಾರ ಉಂಟಾದರೆ, ವಿಮಾ ಕಂತಿನ ಹಣದಲ್ಲಿಯೇ ಭಾರತೀಯ ಸಾಮಾನ್ಯ ವಿಮಾ ನಿಗಮವು ಪಾವತಿಸುವುದು. ವಿಮಾ ಕಂತಿನ ಶೇ. 100ಕ್ಕಿಂತ ಹೆಚ್ಚು ವಿಮಾ ನಷ್ಟ ಪರಿಹಾರ ನೀಡಬೇಕಾದರೆ, ಹೆಚ್ಚಿನ ವಿಮಾ ನಷ್ಟ ಪರಿಹಾರದ ಹಣವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮನಾಗಿ ಭರಿಸುವುವು.

ಉ) ವ್ಯಾಪಕ ಬೆಳೆ ವಿಮಾ ಯೋಜನೆಯಡಿಯಲ್ಲಿ 1985 ರಿಂದ 1999ರ ಮುಂಗಾರು ಹಂಗಾಮಿನ ವರೆಗೂ ಒಟ್ಟುರೂ. 6717.40 ಲಕ್ಷಗಎಳನ್ನು ರೈತರಿಗೆ ಬೆಳೆ ವಿಮಾ ನಷ್ಟ ಪರಿಹಾರವಾಗಿ ಪಾವತಿಸಲಾಗಿದೆ. ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿಯಲ್ಲಿ 2000-01ರಲ್ಲಿ ಒಟ್ಟು ರೂ. 3.27 ಕೋಟಿಗಳ ವಿಮಾ ನಷ್ಟ ಪರಿಹಾರವನ್ನು ನೀಡಲಾಗಿದೆ. 2001ರ ಮುಂಗಾರು ಹಂಗಾಮಿನಲ್ಲಿ ಒಟ್ಟು ರೂ. 132.93 ಕೋಟಿ ಗಳನ್ನು ವಿಮಾ ನಷ್ಟ ಪರಿಹಾರವಾಗಿ ಅಂದಾಜು ಮಾಡಲಾಗಿದೆ. ಇದರಲ್ಲಿ ಮೊದಲನೆ ಕಂತು ರೂ. 20.28 ಕೋಟಿಗಳು ಮತ್ತು ಎರಡನೇ ಕಂತು ರೂ. 57.66 ಕೋಟಿಗಳನ್ನು ಪಾವತಿ ಮಾಡಲಾಗಿದೆ. ಉಳಿದ ಸುಮಾರು ರೂ. 54.99 ಕೋಟಿಗಳನ್ನು ಜುಲೈ ತಿಂಗಳ ಕೊನೆಯೊಳಗಾಗಿ ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಊ) ತೋಟಗಾರಿಕಾ ಬೆಳೆಗಳಿಗೂ ಸಹ ವಿಮಾ ಯೋಜನೆ ಅನ್ವಯಿಸುತ್ತದೆ.

ಭಾಲ್ಕಿಯ ಮಹಾತ್ಮಗಾಂಧಿ ಸಕ್ಕರೆ ಕಾರ್ಖಾನೆಯಲ್ಲಿ ಅವ್ಯವಹಾರ

1409 (1496) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಾಲ್ಕಿ ತಾಲ್ಲೂಕಿನಲ್ಲಿರುವ ಮಹಾತ್ಮಾಗಾಂಧಿ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಕಳೆದ 13 ವರ್ಷಗಳಿಂದ ಆಡಳಿತ ಸಾಮಾನ್ಯ ಸಭೆ ನಡೆಯದೆ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಕಾರಣಗಳೇನು ಮತ್ತು ಕೈಗೊಂಡ ಕ್ರಮಗಳೇನು ;

ಆ) ಕಳೆದ 13 ವರ್ಷಗಳಿಂದ ಒಬ್ಬರೇ ಅಧ್ಯಕ್ಷರುಯಿರುವ ವಿಷಯ ಹಾಗೂ ಇದುವರೆವಿಗೂ ಆಡಿಟ್ ಮಾಡಿಸದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ ಏನು

ಕ್ರಮ ಕೈಗೊಳ್ಳಲಾಗಿದೆ ;

ಇ) ಅಧಕ್ಷರು ಸುಮಾರು 1.5 ಕೋಟಿ ಕಛೇರಿ ಖರ್ಚು ತೋರಿಸಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ ಏನು ಕ್ರಮ ಕೈಗೊಳ್ಳಲಾಗಿದೆ ;

ಈ) ಸುಮಾರು 10,000 ಸದಸ್ಯರು ಷೇರು ಹಣ ನೀಡಿದ್ದರೂ ಕೇವಲ 700 ಷೇರು ಸರ್ಟಿಫಿಕೇಟ್ ನೀಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ ಏನು ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು) :

ಅ) ಬಾಲ್ಕಿ ತಾಲ್ಲೂಕಿನ ಮಹಾತ್ಮಾಗಾಂಧಿ ಸಹಕಾರ ಸಕ್ಕರೆ ಕಾರ್ಖಾನೆ ಕಳೆದ 13 ವರ್ಷಗಳಿಂದ ವಾರ್ಷಿಕ ಮಹಾ ಸಭೆ ನಡೆಸಿಲ್ಲವೆಂಬುದು ಸರಿಯಲ್ಲ ಇದರ 1999-2000ರ ವರೆಗಿನ ವಾರ್ಷಿಕ ಮಹಾ ಸಭೆಗಳನ್ನು ನಡೆಸಲಾಗಿದೆ. ಕಾರ್ಖಾನೆಯ ಬೇಡಿಕೆ ಮೇರೆಗೆ ಸರ್ಕಾರವು ಕಾರ್ಖಾನೆಯ 2001-02ನೇ ವಾರ್ಷಿಕ ಮಹಾ ಸಭೆಯನ್ನು ದಿ : 31-10-2002ರೊಳಗೆ ನಡೆಸಲು ಅನುಮತಿ ನೀಡಿರುತ್ತದೆ.

ಆ) ಹಾಲಿ ಅಧ್ಯಕ್ಷರು ಕಾರ್ಖಾನೆಯ ಆಡಳಿತ ಮಂಡಳಿ ಸದಸ್ಯರಾಗಿ ಸತತವಾಗಿ ಆಯ್ಕೆಯಾಗಿದ್ದು, ಕಾರ್ಖಾನೆಯ ಪೋಟ ನಿಯಮದನ್ವಯ 25 (5) ರಂತೆ ಆಡಳಿತ ಮಂಡಳಿಯಿಂದ ಚುನಾಯಿತರಾಗಿ ಮುಂದುವರೆಯುತ್ತಿದ್ದಾರೆ. ಸಂಘದ ಲೆಕ್ಕ ಪತ್ರಗಳನ್ನು ಇಲಾಖಾ ಲೆಕ್ಕ ಪರಿಶೋಧಕರಿಂದ ಪ್ರತಿ ವರ್ಷವು ಲೆಕ್ಕ ಪರಿಶೋಧನೆ ಮಾಡಿಸಲಾಗಿದೆ. 2000-01ರ ವರೆಗಿನ ಲೆಕ್ಕ ಪರಿಶೋಧನೆ ಆಗಿರುತ್ತದೆ.

ಇ) ಇಲ್ಲ

ಈ) ಇಲ್ಲ

ಬೀದರ್ ಜಿಲ್ಲೆಯ ಬರಪರಿಹಾರ ಯೋಜನೆಯಡಿ ಕೂಲಿಗಾಗಿ ಕಾಳು ನೀಡಿರುವುದು

1410 (1671) ಶ್ರೀ ಪ್ರಕಾಶ ಖಂಡ್ರೆ (ಬಾಲ್ಕಿ): ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಬರ ಪರಿಹಾರದಡಿ ಕೂಲಿಗಾಗಿ ಕಾಳು ಯೋಜನೆಯಡಿ ಕೇಂದ್ರ ಸರ್ಕಾರದರಿಂದ ಬಿಡುಗಡೆಯಾದ ಆಹಾರ ಧಾನ್ಯ (ಅಕ್ಕಿ ಗೋಧಿ) ಎಷ್ಟು?

ಆ) ಕೂಲಿಗಾಗಿ ಕಾಳು ಯೋಜನೆಯಡಿ ತೆಗೆದುಕೊಂಡ ಕಾಮಗಾರಿಗಳೆಷ್ಟು? ಮತ್ತು ಯಾವುದು (ಸಂಪೂರ್ಣ ವಿವರ ನೀಡುವುದು)

ಇ) ಈ ಕಾಮಗಾರಿಗಳಿಗೆ ಬಳಸಿದ ಆಹಾರ ಧಾನ್ಯವೆಷ್ಟು: ಹಾಗೂ ಬಂದಿದ್ದರಲ್ಲಿ ಉಳಿದ ಪ್ರಮಾಣವೆಷ್ಟು: ಉಳಿದಿದ್ದರೆ ಕಾರಣಗಳೇನು: ಉಳಿದ ಧಾನ್ಯಗಳ ಬಗ್ಗೆ ತೆಗೆದುಕೊಂಡ ಕ್ರಮವೇನು?

ಈ) ಬೀದರ್ ಜಿಲ್ಲೆಯಲ್ಲಿನ ಆಕ್ಷನ್ ಪ್ಲಾನ್‌ನ ಪ್ರಕಾರ ಕೂಲಿಗಾಗಿ ಕಾಳು ಯೋಜನೆಯಡಿ ಹಮ್ಮಿಕೊಂಡ ಕಾಮಗಾರಿಗಳು ಯಾವುದು: ಹಾಗೂ ಇದರ ಪ್ರಕಾರ ಮುಗಿಸಿದ ಕಾಮಗಾರಿಗಳೆಷ್ಟು: ಉಳಿದ ಕಾಮಗಾರಿಗಳು ಯಾವುವು: ಉಳಿಯಲು ಕಾರಣವೇನು (ಸಂಪೂರ್ಣ ವಿವರ